ಉಡುಪಿ ಜಿಲ್ಲೆಯಲ್ಲಿ ಪರಿಸರ ನಿಯಂತ್ರಣ ಮಂಡಳಿಯ ನಿಯಮಗಳ ಉಲ್ಲಂಘನೆ.

1520 (1838)

ಶ್ರೀ ಜಯಪ್ರಕಾಶ್ ಹೆಗಡೆ.ಕೆ.(ಬ್ರಹ್ಮಾವರ್): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಉಡುಪಿ ಜಿಲ್ಲೆಯಲ್ಲಿ ಎಷ್ಟು ಉದ್ದಿಮೆಗಳು ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಉಲ್ಲಂಘನೆ ಮಾಡಿದೆ? ಅವುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕೆ.ಎಚ್.ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು):

1) ಉಡುಪಿ ಜಿಲ್ಲೆಯಲ್ಲಿ ನೆಲ ಹಾಗೂ ವಾಯು ಕಾಯ್ದೆಗಳನ್ನು ಉಲ್ಲಂಘಿಸಿರುವ ಉದ್ದಿಮೆಗಳು - 15

ಅವುಗಳಲ್ಲಿ ಒಂದು ಬೃಹತ್ ಉದ್ದಿಮೆಯ ಮೇಲೆ ಜೆ ಎಂ ಎಫ್ ಸಿ ನ್ಯಾಯಾಲಯ ಉಡುಪಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ.

ಒಂದು ಮಧ್ಯಮ ವರ್ಗದ ಉದ್ದಿಮೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತಿದೆ.

13 ಸಣ್ಣ ಪ್ರಮಾಣದ ಉದ್ದಿಮೆಯ ಮೇಲೆ ನೋಟೀಸ್ ಅನ್ನು ಜಾರಿಗೊಳಿಸಲಾಗಿದೆ.

ಪೀನುಗಾರಿಕಾ ಇಲಾಖಾ ರಸ್ತೆಗಳು.

152(1840)

ಶ್ರೀ ಜಯಪ್ರಕಾಶ್ ಹೆಗಡೆ .ಕೆ.(ಬ್ರಹ್ಮಾವರ): ಮಾನ್ಯ ಪೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೀನುಗಾರಿಕಾ ಇಲಾಖಾ ರಸ್ತೆಗಳ ದುರಸ್ತಿಗಾಗಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಹಣವನ್ನು ಪೂಪಲಿಡಲಾಗಿದೆ ಹಾಗೂ ಪ್ರತಿ ರಸ್ತೆಗಳನ್ನು ದುರಸ್ತಿ ಮಾಡಲು ಎಷ್ಟು ವೆಚ್ಚ ಮಾಡಲಾಗಿದೆ. (ವಿವರ ಒದಗಿಸುವುದು)